ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಈ ಮಾನದಂಡವನ್ನು ಬಹುತೇಕ ಠಾಣೆಗಳಲ್ಲಿ ಸಾಮಾನ್ಯವಾಗಿ ಅನುಸರಿಸಲಾಗುತ್ತಿದೆ. ಅದರೂ ಕೊರತೆ ಇದ್ದ ಪಕ್ಷದಲ್ಲಿ, ಎಲ್ಲೆಲ್ಲಿ ಅಗತ್ಯವೋ ಅಲ್ಲಿ ಹೆಚ್ಚಿಸಲು ಸರ್ಕಾರ ಪರಿಶೀಲಿಸುತ್ತದೆ.

ಇ) ಹೌದು. ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಮಂಜೂರಾದ ಅಗ್ನಿಶಾಮಕ ದಳದ ಠಾಣೆಗಳು

2343 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಾರಾಗೃಹ, ಗೃಹರಕ್ಷಕದಳ ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಅಗ್ನಿಶಾಮಕ ದಳದ ಠಾಣೆಗಳು ಎಷ್ಟು? ಅವು ಯಾವುವು? ಇದರಲ್ಲಿ ಕಾರ್ಯಾರಂಭಗೊಂಡ ಠಾಣೆಗಳು ಯಾವುವು?*

ಆ) *1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಅಗ್ನಿಶಾಮಕ ದಳದ ಠಾಣೆಗಳು ಎಷ್ಟು? ಅವು ಯಾವುವು, ಇದರಲ್ಲಿ ಕಾರ್ಯಾರಂಭಗೊಂಡ ಠಾಣೆಗಳು ಯಾವುವು?*

ಇ) *ತೀರ್ಥಹಳ್ಳಿಯಲ್ಲಿ ಅಗ್ನಿಶಾಮಕ ದಳದ ಠಾಣೆಯನ್ನು ಆರಂಭಿಸುವ ಆಲೋಚನೆ ಸರ್ಕಾರಕ್ಕಿದೆಯೇ? ಇದರಲ್ಲಿ ಯಾವಾಗ ಆರಂಭಿಸಲಾಗುವುದು?*

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹರಕ್ಷಕದಳ, ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ಈ ಕೆಳಗೆ ಸೂಚಿಸಿರುವ ಸ್ಥಳಗಳಲ್ಲಿ 15 ಅಗ್ನಿಶಾಮಕ ಠಾಣೆಗಳು ಮಂಜೂರಾಗಿರುತ್ತದೆ. ಇವುಗಳಲ್ಲಿ ಕ್ರಮ ಸಂಖ್ಯೆ 1 ರಿಂದ 14ರವರೆಗೆ ನಮೂದಿಸಿರುವ ಅಗ್ನಿಶಾಮಕ ಠಾಣೆಗಳು ಇನ್ನೂ ತೆರೆಯಲ್ಪಟ್ಟಿರುವುದಿಲ್ಲ. ಕ್ರಮ ಸಂಖ್ಯೆ 15ರಲ್ಲಿ ಸೂಚಿಸಿರುವ ಬೆಳ್ತಂಗಡಿ ಅಗ್ನಿಶಾಮಕ ಠಾಣೆಯನ್ನು ಮಾತ್ರ ದಿನಾಂಕ 28.9.97ರಂದು ತೆರೆಯಲಾಗಿರುತ್ತದೆ.

1. ಹೊಳಲ್ಕೆರೆ	2. ಹೊಸದುರ್ಗ	3. ಮುದ್ದೇಬಿಹಾಳ
4. ರೋಣ	5. ಮುಂಡರಗಿ	6. ಹಿರೇಕೆರೂರು
7. ಅಫಜಲ್ ಪುರ	8. ಕೆ.ಆರ್. ನಗರ	9. ನಂಜನಗೂಡು
10. ಗೌರಿಬಿದನೂರು	11. ಕುಣಿಗಲ್	12. ಸದಲಗಾ
13. ಹಗರಿಬೊಮ್ಮನಹಳ್ಳಿ	14. ಕೊಪ್ಪಳ	15. ಬೆಳ್ತಂಗಡಿ

ಆ) 1997-98ನೇ ಸಾಲಿನಲ್ಲಿ 17 ಅಗ್ನಿಶಾಮಕ ಠಾಣೆಗಳು ಸರ್ಕಾರದಿಂದ

ಮಂಜೂರಾಗಿರುತ್ತವೆ. ಇವುಗಳಲ್ಲಿ ಇಲ್ಲಿಯತನಕ ಯಾವ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭ ಮಾಡಿರುವುದಿಲ್ಲ.

1. ಮುಳಬಾಗಿಲು	2. ಕೆ.ಜಿ.ಎಫ್	3. ಸಕಲೇಶಪುರ
4. ಬೇಲೂರು	5. ಕಲಘಟಗಿ	6. ಮೂಡಿಗೆರೆ
7. ಹೆಚ್.ಡಿ. ಕೋಟೆ	8. ಕರಟಗಿ	9. ಕುಷ್ಟಗಿ
10. ಸಿಂಧಗಿ	11. ಕುರುಗೋಡು	12. ಹರಿಹರ
13. ಸಂಕೇಶ್ವರ	14. ಕಾಟನ್ ಪೇಟೆ ಮುಖ್ಯರಸ್ತೆ, ಬೆಂಗಳೂರು	
15. ಟಿ. ನರಸೀಪುರ	16. ತರೀಕೆರೆ	17. ಹನೂರು

ಇ) ತೀರ್ಥಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆ ತೆರೆಯುವ ವಿಚಾರವು ಸರ್ಕಾರದ ಮುಂದಿದೆ.

ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆ.ವಿ. ಪವರ್ ಸ್ಟೇಷನ್ ತೆರೆಯುವುದು.

2345 - ಶ್ರೀ ಅಪ್ಪಚ್ಚುರಂಜನ್ (ಸೋಮವಾರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆವಿ ಪವರ್ ಸ್ಟೇಷನ್ ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಆ) *ಸೋಮವಾರ ಪೇಟೆ ತಾಲ್ಲೂಕಿನ ಶುಂಠಿಕೊಪ್ಪದಲ್ಲಿ ಕ್ಯಾಷ್ ಕೌಂಟರ್ ತೆಗೆಯಲು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿವೆ. ಪ್ರಸ್ತಾವನೆಯನ್ನು ತಯಾರಿಸಿ ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಸೋಮವಾರಪೇಟೆ ತಾಲ್ಲೂಕಿನ ಶುಂಠಿ ಕೊಪ್ಪದಲ್ಲಿ ಕ್ಯಾಷ್ ಕೌಂಟರ್ ತೆರೆಯಲು ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಲೈನ್ ಸರ್ವೆ ಕಾರ್ಯ

2348 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಲೈನ್‌ಸರ್ವೆ ಕಾರ್ಯ ಆಗಿದೆಯೇ (ಪ್ರಗತಿಯ ವಿವರ ನೀಡುವುದು).*